ಸಿ.ಸಿ .ನಂ. 174/2023 ಪಿಡಬ್ಲೂಃ 1

ದಿನಾಂಕಃ 29-12-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಕುಮಾರಿ ಪಿ ಹೆಚ್ ಕೆ ವಕೀಲರಿಂದಃ**

4. ದಿಃ 15-04-2019 ರಂದು ಆರೋಪಿಯು ಸಾಲಕ್ಕಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ . ಸದರಿ ಅರ್ಜಿಯ ಪ್ರತಿಯನ್ನು ನಾವು ಈ ಪ್ರಕರಣದಲ್ಲಿ ಹಾಜರು ಪಡಿಸಿರುತ್ತೇವೆ . ಸಾಲಕ್ಕಾಗಿ ಅರ್ಜಿಯನ್ನು ಸಲ್ಲಿಸಿದ ಸಂದರ್ಭದಲ್ಲಿ ಆರೋಪಿಯ ಜೊತೆಯಲ್ಲಿ ಅವರ ಮೂರು ಜನ ಜಾಮೀನುದಾರರು ಬಂದಿರುತ್ತಾರೆ . 1,05,000/- ರೂಪಾಯಿ ಸಾಲ ಬೇಕು ಎಂದು ಆರೋಪಿಯು ಅರ್ಜಿಯನ್ನು ಸಲ್ಲಿಸಿರುತ್ತಾರೆ . ಯಾವ ಉದ್ದೇಶಕ್ಕಾಗಿ ಸಾಲದ ಅರ್ಜಿಯನ್ನು ಸಲ್ಲಿರುತ್ತಾರೆ ಎಂದು ನನಗೆ ನೆನಪಿಲ್ಲ . ಒಬ್ಬ ವ್ಯಕ್ತಿಗೆ ಸಾಲವನ್ನು ಮಂಜೂರು ಮಾಡುವ ಸಂದರ್ಭದಲ್ಲಿ ಆ ವ್ಯಕ್ತಿಯ ಸಾಲ ಮರುಪಾವತಿ ಸಾಮರ್ಥ್ಯವನ್ನು ನೋಡಿಯೇ ಸಾಲ ಮಂಜೂರು ಮಾಡುತ್ತೇವೆ ಎಂದರೆ ಸರಿ . ನಮ್ಮ ಆಡಳಿತ ಮಂಡಳಿಯ ಸಭೆಯಲ್ಲಿ ಸಾಲ ಮಂಜೂರು ಮಾಡಬಹುದು ಎಂದು ಆದೇಶ ಆದರೆ ಮಾತ್ರ ನಾವು ಸಾಲ ಮಂಜೂರು ಮಾಡುತ್ತೇವೆ ಎಂದರೆ ಸರಿ . ಈ ಕೇಸಿನ ಸಾಲಕ್ಕೆ ಸಂಬಂಧಪಟ್ಟಂತೆ ನಮ್ಮ ಆಡಳಿತ ಮಂಡಳಿಯ ಸಭೆ ಯಾವಾಗ ನಡೆಯಿತು ಎಂದು ನನಗೆ ನೆನಪಿಲ್ಲ . ಸದರಿ ಮಂಡಳಿಯ ಸಭೆಯಲ್ಲಿ ಆಗಿರುವ ಠರಾವಿನ ಪ್ರತಿಯನ್ನು ನಾವು ಹಾಜರು ಪಡಿಸಿಲ್ಲ . ಸಾಲ ಮಂಜೂರು ಮಾಡುವ ಸಂದರ್ಭದಲ್ಲಿ ಆರೋಪಿಯ ಹಾಗೂ ಅವರ ಜಾಮೀನುದಾರರ ಆಧಾರ ಕಾರ್ಡ ಪ್ರತಿಗಳನ್ನು ಪಡೆದುಕೊಂಡಿರುತ್ತೇವೆ .

5. ಸಾಲದ ಕರಾರು ಪತ್ರ , ಹಾಗೂ ಡಿಮಾಂಡ ಪ್ರಾಮಿಸರಿ ನೋಟುಗಳಿಗೆ ಸಾಲಕ್ಕಾಗಿ ಅರ್ಜಿ ಬಂದ ದಿವಸವೇ ಸಹಿಯನ್ನು ಪಡೆದುಕೊಂಡಿರುತ್ತೇವೆ . ಕೆಲವೊಂದು ಸಲ ಸಾಲಕ್ಕಾಗಿ ಸಲ್ಲಿಸಿದ ಅರ್ಜಿ ತಿರಸ್ಕಾರಗೊಳ್ಳುವ ಸಂಭವ ಇರುತ್ತದೆ ಎಂದರೆ ಸರಿ . ಈ ಕೇಸಿನ ಸಾಲದ ಭದ್ರತೆಗಾಗಿ ಆರೋಪಿಯ ಹಾಗೂ ಅವರ ಜಾಮೀನುದಾರರಿಂದ ಯಾವ ಯಾವ ದಾಖಲೆಗಳನ್ನು ಪಡೆದುಕೊಂಡಿರುತ್ತೇವೆ ಎಂದು ನನಗೆ

ನೆನಪಿಲ್ಲ. ಸಾಲವನ್ನು ಪಡೆದುಕೊಂಡ ನಂತರ ಇಲ್ಲಿಯವರೆಗೆ ಯಾರೂ ಸಹ ಯಾವುದೇ ಹಣವನ್ನು ಮರುಪಾವತಿ ಮಾಡಿರುವುದಿಲ್ಲ . ಸಾಲ ಕಟ್ ಬಾಕಿಯಾದ ನಂತರ ಆರೋಪಿಯ ಜಾಮೀನುದಾರರ ಹತ್ತಿರ ಸಾಲವನ್ನು ತುಂಬಿ ಎಂದು ನಾವು ಕೇಳಿಕೊಂಡಿರುತ್ತೇವೆ . ಆರೋಪಿಯ ಜಾಮೀನುದಾರರಿಗೆ ನಾವು ನೋಟಿಸನ್ನು ಕೊಟ್ಟಿರುತ್ತೇವೆ . ಆರೋಪಿಯ ಜಾಮೀನುದಾರರಿಗೆ ನಮ್ಮ ವಕೀಲರ ಮೂಲಕ ನೋಟಿಸನ್ನು ಕೊಡಿಸಿರುವುದಿಲ್ಲ. ನಾವು ಜಾಮೀನುದಾರರಿಗೆ ಕೊಟ್ಟಿರುವ ನೋಟಿಸಿನ ಪ್ರತಿ ನಮ್ಮ ಶಾಖೆಯಲ್ಲಿ ಇದೆ . ಸದರಿ ನೋಟಿಸಿನ ಪ್ರತಿಯನ್ನು ಈ ಕೇಸಿನಲ್ಲಿ ಹಾಜರು ಪಡಿಸಲು ನಮಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ . ಆರೋಪಿಗೂ ಸಹ ನಾವು ನೋಟಿಸನ್ನು ಕೊಟ್ಟಿರುತ್ತೇವೆ .

(ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.